ಒಪ್ಪಿಗೆಯಿತ್ತು. ಭಾನುವಾರವಾದರೆ ಮನೆಗೆ ಹೋಗುತ್ತಿದ್ದೆ. ಇಲ್ಲವಾದರೆ ಮನೆಯಿಂದ ಯಾರಾದರೂ ನನ್ನನ್ನು ನೋಡಿಕೊಂಡು, ವಿಚಾರಿಸಿಕೊಂಡು ಹೋಗುತ್ತಿದ್ದರು. ಹೀಗೊಮ್ಮೆ ಬಸ್ಸಿನಲ್ಲಿ ಓಡಾಡ್ತಾ ಇರೋವಾಗ ನಾಗರಾಜನ ಪರಿಚಯವಾಯ್ತು. ತುಂಬಾ ಆಕರ್ಷಕವಾಗಿ ಮಾತನಾಡುತ್ತಿದ್ದ... ನಗಿಸುತ್ತಿದ್ದ... ಅನೇಕ ಕತೆಗಳನ್ನು ಹೇಳುತ್ತಿದ್ದ... ಪರಿಚಯ ಜಾಸ್ತಿಯಾದಂತೆಲ್ಲಾ ಸಲಿಗೆ ಹೆಚ್ಚಾಯಿತು. ನನ್ನ ರೂಮಿಗೆ ಅವನನ್ನು ಊಟಕ್ಕೆ ಆಹ್ವಾನಿಸಿದೆ. ಯಾವ ಸಂಕೋಚವೂ ಇಲ್ಲದೆ ಬಂದ. ನಂತರ ಬರುವುದನ್ನೇ ಅಭ್ಯಾಸ ಮಾಡಿಕೊಂಡುಬಿಟ್ಟ. ವಠಾರದವರ, ಮನೆಯವರ ನವಿರಾದ ಎಚ್ಚರಿಕೆಯ ನುಡಿಗಳನ್ನು ಅವನ ಮಾದಕ ನಗು ಕಿತ್ತುಹಾಕುತ್ತಿತ್ತು. ಒಂದೇ ರೂಮು. ಒಂಟಿ ಹೆಣ್ಣು, ಒಂಟಿತನದ ಉಪಯೋಗವನ್ನು ನಾಗರಾಜ ಬಹು ಸುಲಭವಾಗಿ ಪಡೆದುಕೊಂಡ.

'ಇಷ್ಟು ವರ್ಷಗಳಾದ್ರೂ ನೀನಿನ್ನೂ ಪ್ರೇಮಾಂದ್ರೆ ತಿಳಿಯದೇ ಇದ್ದೀಯಲ್ಲ? ಅಬ್‌ನಾರ್ಮಲ್ ನೀನು?' ಎಂದು ಛೇಡಿಸುತ್ತಿದ್ದ... ಆಗೆಲ್ಲಾ ನಂಗೆ ಒಂಥರಾ ಆಗ್ತಾಯಿತ್ತು... ಯಾವುದೋ ಒಂದು ದಿನ. ನಾನೂ ನಾರ್ಮಲ್ ಹೆಣ್ಣು ಎಂದು ತೋರಿಸಿಕೊಡಲು ನನ್ನ ಕನ್ಯತ್ವವನ್ನು ಲೂಟಿಮಾಡಿಬಿಟ್ಟ... ನಂತರದ ದಿನಗಳಲ್ಲಿ ನಾನೇ ಬಾಗಿಲು ತೆರೆದು ಅವನ ಬರವಿಗಾಗಿ, ಅವನ ಸ್ಪರ್ಶಕ್ಕಾಗಿ ಕಾಯುತ್ತಾ ಕುಳಿತುಕೊಳ್ಳುವಂತಾಗಿಬಿಟ್ಟಿತ್ತು. ಅಷ್ಟರಲ್ಲಿ ಮನೆಯವರಿಗೆ ಗೊತ್ತಾಗಿ, ವಠಾರದವರಿಂದ ಛೀಮಾರಿಗೆ ಗುರಿಯಾಗಿ ರೂಮು ಖಾಲಿ ಮಾಡಿ ಹಾಸ್ಟೆಲಿಗೆ ಸೇರಿದೆ... ಮನೆಯಲ್ಲಿ ನನಗೆ ಪುನಃ ಜಾಗ ಸಿಗಲಿಲ್ಲ. ನಾಗರಾಜನ ಬಳಿ ಹೇಳ್ಕೊಂಡು ಅತ್ತೆ... 'ಮದ್ವೆಯಾಗ್ತೇನೆ ಹೆದರಬೇಡಾಂತ' ಭರವಸೆ ಕೊಟ್ಟ. ಕೈತುಂಬಾ ಹಣ ಸಂಪಾದನೆ ಮಾಡ್ತಾ ಇದ್ದ ನನ್ನನ್ನು ಬಿಟ್ಟುಕೊಡಲಾರದೆಯೋ ಏನೋ ಒಂದು ಅಮಾವಾಸ್ಯೆಯ ರಾತ್ರಿ ದೇವರ ಫೋಟೋದ ಮುಂದೆ ಕರೀಮಣಿಯಲ್ಲಿ ಪೋಣಿಸಿದ ಒಂದು ಹವಳವನ್ನು ಕುತ್ತಿಗೆಗೆ ಕಟ್ಟಿದ.

'ಹವಳ ನಮ್ಮ ಕಡೆ ಚಿನ್ನಕ್ಕಿಂತಾ ಶ್ರೇಷ್ಠ... ಈ ದಿನದಿಂದ ನೀನು ನನ್ನ ಹೆಂಡತಿ...' ಎಂದ.

ನಾನು ನಂಬಿ ಉಬ್ಬಿಹೋದೆ. ಯಾವುದೇ ನೌಕರಿಯಿಲ್ಲದೆ ಓಡಾಡುತ್ತಿದ್ದ ಅವನಿಗೆ ತಿಂಗಳ ಸಂಬಳದ ಹಣವನ್ನೆಲ್ಲಾ ನಿರ್ವಂಚನೆಯಿಂದ ಸುರಿಯುತ್ತಿದ್ದೆ... ಕೇವಲ ಒಂದು ತಿಂಗಳಷ್ಟೇ ನಮ್ಮ ದಾಂಪತ್ಯ ನಡೆದಿದ್ದು. ಒಂದು ದಿನ ಇದ್ದಕ್ಕಿದ್ದ ಹಾಗೆ ಮಾಯವಾದವನು. ಲಗ್ನಪತ್ರಿಕೆಯೊಂದಿಗೆ ಪ್ರತ್ಯಕ್ಷನಾದ.

'ನಮ್ಮದು ಸಂಪ್ರದಾಯದ ಕುಟುಂಬ... ನಾವು ಮಾಡಿಕೊಂಡದ್ದು ಮದ್ವೇನೆ ಅಲ್ಲ... ಮನೇಲಿ ಈಗ ನನ್ನ ಮದ್ವೆ ಗೊತ್ತು ಮಾಡಿದ್ದಾರೆ... ಅವರು ಕೊಡೋ ವರದಕ್ಷಿಣೆಯ ಹಣದಿಂದ ಬಿಸಿನೆಸ್ ಪ್ರಾರಂಭಿಸ್ತೇನೆ... ನಿಂಗೂ ಹೇಗೂ ನೌಕರಿಯಿದೆ ಹಾಯಾಗಿದ್ದುಬಿಡು... ಆದದ್ದನ್ನೆಲ್ಲಾ ಮರೆತುಬಿಡು...' ಎಂದು ನುಡಿದವನು, ಜೊತೆಯಲ್ಲಿ ಕರೆದುಕೊಂಡು ಬಂದಿದ್ದ ಅವನ ತಮ್ಮನೊಂದಿಗೆ, 'ಮದ್ವೆ ಜವಳಿ ತಗೊಂಡು ಹೋಗ್ತೀನಿ... ಇವಳ ಮನೆಯವರಿಗೆ ಹೇಳಿ... ನೀನು ಬಂದುಬಿಡು...' ಎಂದು ಹೋಗಿಬಿಟ್ಟ..."

ಗೀತಾ ಈಗ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿಬಿಟ್ಟಳು... ಪ್ರೊಫೆಸರ್ ತಡೆಯಲು ಹೋಗಲಿಲ್ಲ. ಹೆಪ್ಪುಗಟ್ಟಿದ ಭಾವನೆಗಳೆಲ್ಲಾ... ನೀರಾಗಿ ಹೊರಗೆ ಬರಲೀಂತ ನೋಡುತ್ತಾ ಕುಳಿತಿದ್ದರು.

ಸ್ವಲ್ಪ ಸಮಯದ ನಂತರ, ಸಮಾಧಾನ ಹೊಂದಿದವಳಂತೆ ಗೀತಾ, "ಅದೇ ರಾತ್ರಿ ಒಂದು ಬೊಗಸೆ ನಿದ್ದೆ ಗುಳಿಗೆಗಳನ್ನು ನುಂಗಿಬಿಟ್ಟೆ. ಅವರ ತಮ್ಮ ದಿವಾಕರ್ ಅದ್ಹೇಗೆ ನನ್ನನ್ನು ಹೊತ್ತುಕೊಂಡು ಆಸ್ಪತ್ರೆಗೆ ಹೋದರೋ ನಂಗೆ ಈಗಲೂ ಆಶ್ಚರ್ಯ... ಒಂದು ವಾರ ಸತತವಾಗಿ